ತಮ್ಮ 'ಮಿನಿಯೇಚರ್' ಚಿತ್ರಗಳ ಅಡಿಪಾಯವಾಗಿ ರಾವ್‌ಬೈಲ್ ಅಂಚೆ ಚೀಟಿಗಳನ್ನು ಆಯ್ದುಕೊಂಡಿದ್ದರು. ಪೋಸ್ಟಾಫೀಸಿನಿಂದ ಕೊಂಡು ತಂದ ಸ್ಟಾಂಪುಗಳಿಗೆ ಇವರದ್ದೇ ಆದ ಕೆಲವು ಗೆರೆಗಳು, ಬಣ್ಣದ ಹನಿಗಳು ಹೊಸ ರೂಪ, ಅರ್ಥವಂತಿಕೆಗಳನ್ನು ದೊರಕಿಸಿದವು. 'ಗ್ಯಾಲರಿ ಡೆನ್ ಬರ್ಗ್'ದಲ್ಲಿ ಇವುಗಳಿಗೆ ತುಂಬ ಬೇಡಿಕೆಯಿತ್ತಂತೆ.

ಅಂಚೆ ಚೀಟಿಗಳಂತೆ ರಾವ್‌ಬೈಲ್ ಲಕೋಟೆಗಳನ್ನು ಸಹ 'ಕೊಲಾಜ್'ನಿಂದ ಶೃಂಗರಿಸುತ್ತಿದ್ದರು. ಅದರಲ್ಲಿ ತಮ್ಮನ್ನೇ ಕುರಿತ ಕೆಲವೇ ಗೆರೆಗಳ ಅಣಕ ಚಿತ್ರವೊಂದಿರುತ್ತಿತ್ತು. ಗೆಳೆಯರಿಗೆ ಪತ್ರ ಬರೆಯುವಾಗ ಅವರು ಇವನ್ನೇ ಉಪಯೋಗಿಸುತ್ತಿದ್ದರು.

## ಕುಂಚವೆಂಬ ಅಸ್ತ್ರ

ಒಮ್ಮೆ ಪ್ರದರ್ಶನ ನೋಡಲು ಬಂದ ಒಬ್ಬ ಮಹಿಳೆ ರಾವ್‌ಬೈಲರ ತೈಲಚಿತ್ರವೊಂದನ್ನು ತುಂಬ ಮೆಚ್ಚಿ ತಾನದನ್ನು ಕೊಳ್ಳುವುದಾಗಿ ಹೇಳಿದಳಂತೆ. ತಾನು ಆ ಕಾಲದ ಒಬ್ಬ ಗೌರವಾನ್ವಿತ ಚಿತ್ರನಟನ ಸಹೋದರಿಯೆಂದು ಪರಿಚಯಿಸಿಕೊಂಡು ಸ್ವಲ್ಪ ಟೋಕನ್ ಹಣ ಕೊಟ್ಟು ಚೆಕ್ ಕಳಿಸುತ್ತೇನೆ ಎಂದಳಂತೆ. ರಾವ್‌ಬೈಲ್ ವಿಶ್ವಾಸದಿಂದ ತೈಲಚಿತ್ರವನ್ನು ಪ್ಯಾಕ್ ಮಾಡಿ ಕೊಟ್ಟರು. ಆದರೆ ಪ್ರದರ್ಶನ ಮುಗಿದು ತಿಂಗಳು ಕಳೆದರೂ ಆ ಮಹಿಳೆಯ ಚೆಕ್ ಬರಲಿಲ್ಲ. ಆಕೆಯನ್ನು ಸಂಪರ್ಕಿಸಲು ಪ್ರಯತ್ನಿಸಿದಾಗಲೆಲ್ಲ ತಪ್ಪಿಸಿಕೊಳ್ಳತೊಡಗಿದಳು. ಆಕೆ ಬೇಕು ಎಂದೇ ಹೀಗೆ ಮಾಡುತ್ತಾಳೆಂದು ಮನಗಂಡ ರಾವ್‌ಬೈಲ್ ತಮ್ಮ ಕುಂಚವೆಂಬ ಅಸ್ತ್ರವನ್ನು ಕೈಗೆತ್ತಿಕೊಂಡರು. ಒಂದರ ಹಿಂದೊಂದರಂತೆ ತಮ್ಮ ಕಲಾತ್ಮಕ ಲಕೋಟೆಗಳಲ್ಲಿ ಆಕೆಗೆ ಪತ್ರ ಹಾಕಲಾರಂಭಿಸಿದರು. ಪತ್ರಗಳಲ್ಲಿ ಹಣಕ್ಕಾಗಿ ಬೇಡಿಕೆ, ಕೊಡದೇ ಇದ್ದುದರ ಬಗ್ಗೆ ಸಿಟ್ಟು ಅಥವಾ ಬೆದರಿಕೆಗಳೇನೂ ಇರಲಿಲ್ಲ. ಕೇವಲ 'ಪ್ರಾಮಾಣಿಕತೆ ಇಲ್ಲದ ಕಲಾಪ್ರೇಮ ಕಲಾಪ್ರೇಮವೇ?', 'ಕಲಾವಿದನಿಗೆ ಮೋಸ! ಛೇ... ಎಂಥ ನಾಚಿಕೆಗೇಡು!' ಎಂಬಂಥ ಸಂದೇಶಗಳು.

ಮೊದಮೊದಲು ಆ ಮಹಿಳೆಗೆ ಮೋಜೆನಿಸಿರಬಹುದು. ಆದರೆ ಪತ್ರಗಳು ನಿಲ್ಲುವ ಲಕ್ಷಣಗಳೇ ಕಾಣದಾಗ ಆಕೆ ಹೌಹಾರಿರಬೇಕು. ಪೊಲೀಸರ ಬಳಿ ಹೋದರೆ ಇದನ್ನು ಬ್ಲ್ಯಾಕ್‌ಮೇಲ್ ಎನ್ನುವಂತಿರಲಿಲ್ಲ. 'ಸತ್ಯಾಗ್ರಹ'ವೆಂದು ಪರಿಗಣಿಸುತ್ತಿದ್ದರೋ ಏನೋ.

ಎರಡು ವಾರ ಕಳೆಯುತ್ತಿದ್ದಂತೆ ಚಿತ್ರನಟರ ಆಫೀಸಿನಿಂದ ಅವರನ್ನು ಬಂದು ಕಾಣುವಂತೆ ಫೋನ್ ಬಂತಂತೆ. ನಿಗದಿತ ದಿನ ತುಸು ಬಿಗುಮಾನದಿಂದಲೇ ಅಲ್ಲಿಗೆ ಹೋದ ರಾವ್‌ಬೈಲರನ್ನು ಚಿತ್ರನಟ ತುಂಬ ಆದರದಿಂದ ಬರಮಾಡಿಕೊಂಡು ಸಹೋದರಿಯ ಪರವಾಗಿ ಕ್ಷಮೆಯಾಚಿಸಿ ಚೆಕ್ ಕೊಟ್ಟರಂತೆ. ಬಳಿಕ ತಮ್ಮ ಟೇಬಲ್ಲಿನ ಗ್ಲಾಸಿನಡಿಯಲ್ಲಿದ್ದ ರಾವ್‌ಬೈಲರ ಲಕೋಟೆಗಳನ್ನು ತೋರಿಸಿ ಅವುಗಳನ್ನು ತಾನು ಇರಿಸಿಕೊಳ್ಳುವುದಾಗಿ ಹೇಳಿ ಅದಕ್ಕಾಗಿ






ಫಿಶ್ ಟ್ಯಾಂಕ್ ಸರಣಿ ಚಿತ್ರಗಳು